# ಸರಸ್ವತಿ

## ವಿಸ್ಮಯ-ಸಂಸ್ಕೃತಿ

ಬಿ. ಆರ್. ಸತ್ಯನಾರಾಯಣ



## ಡಾ. ಬಿ.ಆರ್. ಸತ್ಯನಾರಾಯಣ

ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕಿನ ಬಾಳೆಹಳ್ಳಿಯಲ್ಲಿ ಜನನ. ಚಾಮರಾಜಪುರದಲ್ಲಿ ವಾಸ. ತಂದೆ ಶ್ರೀ ಬಿ.ಟಿ.ರಂಗೇಗೌಡ; ತಾಯಿ ಶ್ರೀಮತಿ ಲಕ್ಕಮ್ಮ. ಬಾಳೆಹಳ್ಳಿ, ಮೂಡನಹಳ್ಳಿ, ಹಳೇಬೀಡು, ಕುಂದೂರು ಸರ್ಕಾರಿ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣ. ಕುಂದೂರುಮಠದ ಸರ್ಕಾರಿ ಪ್ರೌಢಶಾಲೆಯಲ್ಲಿ ಹತ್ತನೇ ತರಗತಿಯಲ್ಲಿ ಏಕೈಕ ವಿದ್ಯಾರ್ಥಿಯಾಗಿ ಉತ್ತೀರ್ಣ. ತಿಪಟೂರಿನಲ್ಲಿ ಪಿ.ಯು. ಶಿಕ್ಷಣ ಮುಗಿಸಿದ ನಂತರ ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿ.ಎಸ್‌ಸಿ. ಪದವಿ. ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡ ಡಿಪ್ಲೋಮಾ ಹಾಗೂ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ. ಉದ್ಯೋಗನಿಮಿತ್ತವಾಗಿ ಬೆಂಗಳೂರು ವಾಸ. ಪ್ರಸ್ತುತ ಸುರಾನ ಕಾಲೇಜು ಗ್ರಂಥಪಾಲಕ.

ವೃತ್ತಿಯಿಂದ ಗ್ರಂಥಪಾಲಕರಾಗಿದ್ದರೂ, ಕನ್ನಡ ಸಾಹಿತ್ಯ ಸಂಸ್ಕೃತಿ ಮತ್ತು ಇತಿಹಾಸದಲ್ಲಿ ಇದ್ದ ಆಸಕ್ತಿಯಿಂದಾಗಿ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ. ಪದವಿ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶಾಸನಶಾಸ್ತ್ರ ಮತ್ತು ಜಾನಪದಶಾಸ್ತ್ರ ಪರೀಕ್ಷೆಗಳಲ್ಲಿ ಪ್ರಥಮ ರ್‍ಯಾಂಕ್. ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನದ ಹಸ್ತಪ್ರತಿಶಾಸ್ತ್ರ ಪರೀಕ್ಷೆಯಲ್ಲೂ ಉತ್ತೀರ್ಣ. ಡಾ.ದೇವರಕೊಂಡಾರೆಡ್ಡಿಯವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ 'ಸರಸ್ವತಿ ದರ್ಶನ: ಸಾಹಿತ್ಯ, ಶಾಸನ, ಜಾನಪದ ಮತ್ತು ಶಿಲ್ಪಗಳ ಹಿನ್ನೆಲೆಯಲ್ಲಿ' ಎಂಬ ಪ್ರೌಢಪ್ರಬಂಧಕ್ಕೆ ಪಿಹೆಚ್.ಡಿ. ಪದವಿ.

'ವೈತರಣೀ ದಡದಲ್ಲಿ' (ಕವನಸಂಕಲನ), 'ಕನ್ನಡ ಛಂದಸ್ಸು: ಸಂಕ್ಷಿಪ್ತ ಪರಿಚಯ', 'ಮುಡಿ' (ಕಥಾ ಸಂಕಲನ) ಮತ್ತು 'ನನ್ನ ಹೈಸ್ಕೂಲು ದಿನಗಳು' ಪ್ರಕಟಿತ ಕೃತಿಗಳು. ಸಹ ಸಂಪಾದಕರಾಗಿ, 'ತೇಜಸ್ವಿ' (ವಿಚಾರ ಸಂಕಿರಣದಲ್ಲಿ ಮಂಡಿತವಾದ ಲೇಖನಗಳ ಸಂಗ್ರಹ), 'ಹಂಪನಾ ವಾಙ್ಮಯ' (ಹಂಪನಾ ಪುಸ್ತಕಗಳ ಸಾರಸೂಚಿ) ಸಂಪಾದಿತ ಕೃತಿಗಳು. ಜೊತೆಗೆ ವಿವಿಧ ನಿಯತಕಾಲಿಕೆಗಳಲ್ಲಿ ಹಲವಾರು ಸಂಶೋಧನಾ ಲೇಖನಗಳು ಪ್ರಕಟವಾಗಿರುತ್ತವೆ.

'ಅಳಿದ ಮೇಲೆ' ಕಥೆ 'ಕರ್ಮವೀರ ದೀಪಾವಳಿ ಕಥಾಸ್ಪರ್ಧೆ 2001'ರಲ್ಲಿ ವಿಶೇಷ ಕಥೆಯಾಗಿ ಆಯ್ಕೆಯಾಗಿದ್ದರೆ, 'ಎತ್ತಣಿಂದೆತ್ತಣ ಸಂಬಂಧವಯ್ಯಾ...' ಕಥೆಗೆ 2003ರ 'ಕೃಷ್ಣಮೂರ್ತಿ ಪುರಾಣಿಕ ಸಾಹಿತ್ಯ ಪ್ರಶಸ್ತಿ' ಸಂದಿರುತ್ತದೆ. 'ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ'ವು ನಡೆಸಿದ 2004ರ ಕಥಾಸ್ಪರ್ಧೆಯಲ್ಲಿ ಆಯ್ಕೆಯಾಗಿ ಪ್ರಕಟವಾದ 'ಮುಡಿ' ಕಥಾಸಂಕಲನಕ್ಕೆ 'ವೀನವೀ ಪ್ರಕಾಶನದ' ವತಿಯಿಂದ ನೀಡುವ 'ಎಂ.ಜಿ.ರಂಗನಾಥನ್ ಸ್ಮಾರಕ ಪುಸ್ತಕ ಪ್ರಶಸ್ತಿ'ಯೂ ದೊರೆತಿರುತ್ತದೆ.

# ಸರಸ್ವತಿ

## ವಿಸ್ಮಯ ಸಂಸ್ಕೃತಿ

ಡಾ. ಬಿ.ಆರ್. ಸತ್ಯನಾರಾಯಣ

**ಸೃಷ್ಟಿ ಪಬ್ಲಿಕೇಷನ್ಸ್**
ವಿಜಯನಗರ, ಬೆಂಗಳೂರು – ೫೬೦ ೦೪೦

# ಸರಸ್ವತಿ
## ವಿಸ್ಮಯ ಸಂಸ್ಕೃತಿ

**SARASWATHI**
**Vismaya Samskriti**
by

**Dr. B.R. Satayanarayana**
# 49, 'EEKSHITHA', 2nd Cross,
Manjunathanagar,
BSK 3rd Stage, Ittamadu
Bengaluru - 560 085
Ph: 95355 70748
Email: satya_nbr@yahoo.com

**Published by**
Srushtinagesh
**Srushti Publications**
# 121, 13th Main, M.C. Layout
Vijayanagar, Bengaluru - 560 040
Ph: 080 2315 3558
Email: srushti_publications@yahoo.co.in

Cover Page: Kiran Madalu
Paper used: 70 GSM NS Book Print
Pages: 352
₹ : **250/-**
First Impression: 2010
Copy Rights: Author
**ISBN: 978-81-909981-5-4**

# ಸರಸ್ವತಿ – ವಿಸ್ಮಯ ಸಂಸ್ಕೃತಿ

ನಮ್ಮಲ್ಲಿ ಸಾಹಿತ್ಯ ಮತ್ತು ಸಂಶೋಧನೆಗಳು ಸಮ ಸಮಾನಂತರವಾಗಿ ಮತ್ತು ಸಮೃದ್ಧವಾಗಿ ಪ್ರವಹಿಸುತ್ತಿದ್ದ ಕಾಲವೊಂದಿತ್ತು. ಈಗೀಗ ಸಾಹಿತ್ಯದ ಹೊನಲು ಸಮೃದ್ಧವಾಗಿಯೇ ಇರುವುದಾದರೂ ಸಂಶೋಧನೆಯ ಹೊನಲು ಮೊದಲ ಉಕ್ಕು ಕಳೆದುಕೊಂಡ ಹಾಗಿದೆ. ಅದಕ್ಕೆ ಬಹುಮುಖ್ಯ ಕಾರಣ ಸಂಶೋಧಕ ಗಳಿಸಬೇಕಾದ ಪರಿಣಿತಿ, ನಡೆಸಬೇಕಾದ ನಿರಂತರ ವ್ಯಾಸಂಗ ಮತ್ತು ತ್ವರಿತವಾಗಿ ಸಿಕ್ಕಬಹುದಾದ ಯಶಸ್ಸಿನತ್ತ ಗಮನಹರಿಸದ ನಿತಾಂತ ಶ್ರದ್ಧೆ ಹೊಸಪೀಳಿಗೆಯಲ್ಲಿ ಕಡಿಮೆಯಾಗುತ್ತಿರುವುದು. ಇದು ಕನ್ನಡ ಸಾಹಿತ್ಯ ಸಂಸ್ಕೃತಿಯ ಒಟ್ಟಂದದ ಮುನ್ನಡೆಗೆ ತಕ್ಕಮಟ್ಟಿನ ತೊಡಕೆಂದೇ ನಮ್ಮ ಹಿರಿಯ ವಿದ್ವಾಂಸರು ಭಾವಿಸುತ್ತಾರೆ. ಇಂಥ ಸಂದರ್ಭದಲ್ಲಿ ಹೊಸ ಪೀಳಿಗೆಯ ಕೆಲವರಾದರೂ ಸಂಶೋಧನೆಯತ್ತ ಮನಸ್ಸು ಹರಿಬಿಡುತ್ತಿರುವುದು ಸಮಾಧಾನ ಪಡಬಹುದಾದ ಸಂಗತಿಯಾಗಿದೆ. ಶ್ರೀ ಬಿ. ಆರ್. ಸತ್ಯನಾರಾಯಣ ತಮ್ಮ ಸರಸ್ವತಿ ಕುರಿತ 'ಸರ್ವಾಂಗಕೋಶ'ದ ಮೂಲಕ ಸಂಶೋಧನಾ ಕ್ಷೇತ್ರಕ್ಕೆ ತೊಡಗಿಕೊಂಡಿರುವುದು ನಿಜಕ್ಕೂ ಸಾಹಿತ್ಯಾಸಕ್ತರಿಗೆ ಸಂತೋಷ ನೀಡುವ ಸಂಗತಿಯಾಗಿದೆ.

ಸರಸ್ವತಿ, 'ಜ್ಞಾನಕೋಶ' ಮಾದರಿಯ ಕೃತಿಯಾಗಿದೆ. ಇಂಥ ಕೃತಿಯನ್ನು ರಚಿಸುವುದಕ್ಕೆ ಒದಗಿಬಂದ ಪ್ರೇರಣೆ ಮತ್ತು ಕಾರಣವನ್ನು ಕುರಿತು ಲೇಖಕರೇ ತಮ್ಮ ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ. ಸರಸ್ವತಿಯ ಬಗೆಗೆ ಇದುವರೆಗೆ ನಡೆದಿರುವ ಮಹತ್ವವೆನ್ನಬಹುದಾದ ಅಧ್ಯಯನಗಳು ಕೂಡಾ ತಮ್ಮಷ್ಟಕ್ಕೆ ತಾವು ಸೀಮಿತಾರ್ಥದಲ್ಲಿ ಪರಿಪೂರ್ಣವಾದರೂ, ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ವಿಷಯಕ್ಕೆ ಬಂದಾಗ ಅಪೂರ್ಣವಾಗಿರುವುದನ್ನು ಗಮನಿಸಿದ್ದೇವೆ. ಕನ್ನಡದಲ್ಲಿಯಂತೂ ಸರಸ್ವತಿಯನ್ನು ಕುರಿತು ಒಂದು ಸಮಗ್ರವೆನ್ನಬಹುದಾದ ಅಧ್ಯಯನವಾಗಿಯೇ ಇಲ್ಲ. ಸುಮಾರು ಎರಡು ಸಾವಿರ ವರ್ಷಗಳಿಂದ ಜೀವಂತವಿರುವ, ಒಂದು ಜೀವಂತ ಸಂಸ್ಕೃತಿಯ ಹಿನ್ನೆಲೆಯಲ್ಲಿ ಅಂಥ ಸಂಶೋಧನೆಯನ್ನು ನಡೆಸುವುದೇ ಪ್ರಸ್ತುತ ಅಧ್ಯಯನದ ಮೂಲ ಉದ್ದೇಶ. ಲೇಖಕರ ಈ ಮೂಲ ಉದ್ದೇಶವು ಈ ಕೃತಿಯಲ್ಲಿ ಸಮರ್ಥವಾಗಿ ಸಾಧಿತವಾಗಿದೆ ಎಂಬುದು ಅಭಿಮಾನಪಡಬಹುದಾದ ಸಂಗತಿಯಾಗಿದೆ. ಲೇಖಕರೇ ಸೂಚಿಸಿರುವಂತೆ,

ಕನ್ನಡ ಸಂಸ್ಕೃತಿಯ ಅವಿಭಾಜ್ಯ ಆಕರಗಳಾದ ಸಾಹಿತ್ಯ, ಜಾನಪದ, ಶಾಸನ, ಶಿಲ್ಪ, ಚಿತ್ರಕಲೆ ಮೊದಲಾದವುಗಳ ಹಿನ್ನೆಲೆಯಲ್ಲಿ ಅಧ್ಯಯಯನವನ್ನು ನಡೆಸಲಾಗಿದೆ. ಅದಕ್ಕೆ ಪೂರ್ವಭಾವಿಯಾಗಿ ಸರಸ್ವತಿಯ ಮೂಲ ಸ್ವರೂಪವನ್ನು ಅರಿಯಲು ವೈದಿಕ, ಜೈನ, ಮತ್ತು ಬೌದ್ಧ ಮತಗಳ ಸರಸ್ವತಿ ಮತ್ತು ವಿಶ್ವಸಂಸ್ಕೃತಿಯಲ್ಲಿ (ಅದನ್ನು ಅನ್ಯದೇಶೀಯ ಸಂಸ್ಕೃತಿಗಳಲ್ಲಿ ಎನ್ನುವುದು ಹೆಚ್ಚು ಸೂಕ್ತ) ಸರಸ್ವತಿಗೆ ಸಮಾನವಾದ ಸ್ವರೂಪವುಳ್ಳ ದೇವತೆಗಳ ಸ್ವರೂಪವನ್ನೂ ಕುರಿತು ಅಧ್ಯಯನ ನಡೆಸಲಾಗಿದೆ. ಇವುಗಳಲ್ಲದೆ ಕನ್ನಡ ಸಂಸ್ಕೃತಿಯುನ್ನು ಪ್ರಭಾವಿಸಿರುವ ವೈದಿಕ ಪುರಾಣಗಳು, ಮಹಾಕಾವ್ಯಗಳಲ್ಲಿ ಅಂತರ್ಗತವಾಗಿರುವ ಸರಸ್ವತಿಯ ಬಗೆಗಿನ ವಿಚಾರಗಳನ್ನು ಗಮನಿಸಲಾಗಿದೆ. ಕನ್ನಡ ಸಾಹಿತ್ಯದ ವಸ್ತು, ವಿಷಯ, ರೂಪ, ಛಂದಸ್ಸು, ಕಾವ್ಯಮೀಮಾಂಸೆ ಇವುಗಳ ಮೇಲೆ ಅತಿ ಹೆಚ್ಚು ಪ್ರಭಾವ ಬೀರಿದ ಸಂಸ್ಕೃತ ಸಾಹಿತ್ಯದ ಕೆಲವು ಪ್ರಮುಖ ಕವಿಗಳ ಸರಸ್ವತೀ ಸಂಬಂಧೀ ವಿಷಯಗಳನ್ನು ಕನ್ನಡ ಸಾಹಿತ್ಯ ಸರಸ್ವತಿಯ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ. ಕರ್ನಾಟಕ ರಾಜ್ಯಾದ್ಯಂತ ಸಿಗುವ ನೂರಾರು ಸರಸ್ವತಿಯ ಶಿಲ್ಪಗಳ ಅಧ್ಯಯನಕ್ಕೆ ಪೂರ್ವಭಾವಿಯಾಗಿ ವೈದಿಕ, ಜೈನ, ಬೌದ್ಧ ಮತಗಳ ಶಿಲ್ಪಶಾಸ್ತ್ರೀಯ ಆಧಾರ ಗ್ರಂಥಗಳನ್ನಲ್ಲದೆ, ತಾಂತ್ರಿಕ ಪಠ್ಯಗಳನ್ನೂ ಗಮನಿಸಲಾಗಿದೆ.

ಶ್ರೀ ಬಿ.ಆರ್. ಸತ್ಯನಾರಾಯಣರ ಮನೋಧರ್ಮ ಸಂಶೋಧನೆಗೆ ಹೇಳಿ ಮಾಡಿಸಿದಂತಿದೆ. ಭಾಷೆಯಲ್ಲಿ ನೇರ ಮತ್ತು ನಿಖರವಾದ ಅಭಿವ್ಯಕ್ತಿ ಕ್ರಮವಿದೆ. ಅನಗತ್ಯ ಊತಗಳು ಕಾಣುವುದಿಲ್ಲ. ಶೈಲಿಯು ಯಾವ ಕಾರಣಕ್ಕೂ ಆಲಂಕಾರಿಕವಾಗುವುದಿಲ್ಲ. ಹೀಗಾಗಿ ಉದ್ದಕ್ಕೂ ಪುಸ್ತಕದಲ್ಲಿ ವಿಷಯದ ನಿರ್ದುಷ್ಟತೆ ಕಂಡುಬರುತ್ತದೆ. ಸರಸ್ವತಿ ಎಂಬ ಒಂದು ಪರಿಕಲ್ಪನೆಯ ಸುತ್ತಾ ಸಮಗ್ರವಾಗಿ ಹೇಳಬಬಹುದಾದುದ್ದನ್ನೆಲ್ಲಾ ಇಲ್ಲಿ ಹೇಳಲಾಗಿದೆ ಎಂಬ ತೃಪ್ತಿ ಓದುಗರಿಗೆ ಉಂಟಾಗುವಂತೆ ಕೃತಿಯ ರಚನಾ ವಿನ್ಯಾಸ ರೂಪದಾಳಿದೆ. ಕನ್ನಡದಲ್ಲಿ ಇಷ್ಟು ಸೊಗಸಾಗಿ ಸರಸ್ವತಿ ಎಂಬ ಪರಿಕಲ್ಪನೆಯನ್ನು ಕುರಿತು ಒಂದು 'ಜ್ಞಾನಕೋಶ'ವನ್ನೇ ನಿರ್ಮಿಸಿರುವ ಸಂಶೋಧಕರನ್ನು ಹೃತ್ಪೂರ್ವಕವಾಗಿ ಅಭಿನಂದಿಸಬೇಕಾಗಿದೆ. ಮುಂದಿನ ಅಧ್ಯಯನಗಳು ಈ 'ಜ್ಞಾನಕೋಶ'ವನ್ನು ಇನ್ನಷ್ಟು ಮತ್ತಷ್ಟು ಸಮೃದ್ಧಗೊಳಿಸುವಲ್ಲಿ ಈ ಕೃತಿ ಮೂಲ ಆಕರವಾಗಿ ನಿಲ್ಲುತ್ತದೆ. ಸಂಶೋಧನೆ ಎನ್ನುವುದು ಒಂದು ಸಾಮೂಹಿಕ ಕ್ರಿಯಾಶೀಲತೆಯಾಗಿರುವುದರಿಂದ ಸರಸ್ವತೀ ಚಿಂತನೆಯು ಮುಂದಿನ ದಿನಗಳಲ್ಲಿ ಮತ್ತಷ್ಟು ಗರಿಕಟ್ಟಿಕೊಳ್ಳುವುದರಲ್ಲಿ ನನಗೆ ಸಂದೇಹವಿಲ್ಲ.

ಇಂಥ ಒಂದು ಕೃತಿಯನ್ನು ಸಮರ್ಥವಾಗಿ ನಿರ್ವಹಿಸಿರುವ ಸಂಶೋಧಕರನ್ನೂ, ಇಂಥ ಒಂದು ಕೃತಿಯನ್ನು ಪ್ರಕಟಿಸಲು ಮುಂದಾಗಿರುವ ಪ್ರಕಾಶಕರನ್ನೂ ಎಷ್ಟು ಶ್ಲಾಘಿಸಿದರೂ ಕಮ್ಮಿಯೇ. ಶ್ರೀ ಬಿ.ಆರ್.ಸತ್ಯನಾರಾಯಣ ಸಂಶೋಧನ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ಹೊಸ ಪೀಳಿಗೆಯ ಒಬ್ಬ ಗಂಭೀರ ಲೇಖಕ ಎಂಬ ಮಾತನ್ನಂತೂ ಇಲ್ಲಿ ಹೇಳಲೇಬೇಕಾಗಿದೆ.

**ಡಾ. ಎಚ್.ಎಸ್. ವೆಂಕಟೇಶಮೂರ್ತಿ**

# ಲೇಖಕರ ಮಾತು

ಕ್ರಿ.ಶ. 1998ರಲ್ಲಿ ನಾನು ಉದ್ಯೋಗಾರ್ಥಿಯಾಗಿ ಬೆಂಗಳೂರಿಗೆ ಬಂದೆ. ಬೆಳಿಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯವರಗೆ ಮಾತ್ರ ಉದ್ಯೋಗ. ಬಿಡುವಿನಲ್ಲಿ ಯಾವುದಾದರೂ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕೆಂಬ ಉತ್ಕಟವಾದ ಆಕಾಂಕ್ಷೆ. ಆಗೊಂದು ದಿನ ದಿನಪತ್ರಿಕೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ 'ಶಾಸನಶಾಸ್ತ್ರ' ತರಗತಿಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದ್ದು ಕಣ್ಣಿಗೆ ಬಿತ್ತು. ಮುಕ್ತ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ತರಗತಿಗೆ ದಾಖಲಾಗಿದ್ದ ನನಗೆ, ಅಲ್ಲಿ 'ಶಾಸನಶಾಸ್ತ್ರ' ಎಂಬ ಒಂದು ಪತ್ರಿಕೆಯೇ ಇತ್ತು. ಸಂಜೆಯ ವೇಳೆ ತರಗತಿಗಳು ನಡೆಯುತ್ತಿದ್ದುದರಿಂದ, ಯಾವುದೇ ಯೋಚನೆ ಮಾಡದೆ ನಾನು ಶಾಸನಶಾಸ್ತ್ರ ತರಗತಿಗೆ ಸೇರಿದೆ. ಅಲ್ಲಿಂದ ಮುಂದೆ ನನ್ನ ಅಧ್ಯಯನ, ಆಸಕ್ತಿ ಮೊದಲಾದವು ಬದಲಾಗಿಬಿಟ್ಟವು.

ಶಾಸನಗಳ ಅಧ್ಯಯನ ಬಹುಮುಖಿಯಾದದ್ದು. ಅದಕ್ಕೆ ಪೂರಕವಾಗಿ ಇತಿಹಾಸ, ಸಾಹಿತ್ಯ, ದೇವಾಲಯ ವಾಸ್ತುಶಿಲ್ಪ, ಮೂರ್ತಿಶಿಲ್ಪ ಮೊದಲಾದವುಗಳ ತಿಳುವಳಿಕೆ ಅಗತ್ಯ. ಪ್ರವೇಶ ಮತ್ತು ಪ್ರೌಢ ಶಾಸನಶಾಸ್ತ್ರ ತರಗತಿಗಳು ಮುಗಿಯುವಷ್ಟರಲ್ಲಿ ನನ್ನ ಕನ್ನಡ ಎಂ.ಎ. ಕೂಡಾ ಮುಗಿದಿತ್ತು. ಪ್ರೌಢ ತರಗತಿಗಳಲ್ಲಿ ಇದ್ದಾಗಲೇ, 'ಜಾನಪದಶಾಸ್ತ್ರ' ಪ್ರವೇಶ ತರಗತಿಗೂ ದಾಖಲಾಗಿ ಅದನ್ನು ಯಶಸ್ವಿಯಾಗಿ ಮುಗಿಸಿಬಿಟ್ಟಿದ್ದೆ. ಬಿಎಂಶ್ರೀ ಪ್ರತಿಷ್ಠಾನದವರು ನಡೆಸುತ್ತಿದ್ದ 'ಹಸ್ತಪ್ರತಿಶಾಸ್ತ್ರ' ತರಬೇತಿಯನ್ನೂ ಪಡೆದೆ. ಪಿಹೆಚ್.ಡಿ. ಮಾಡುವುದಾದರೆ ಇದೇ ಕ್ಷೇತ್ರದಲ್ಲಿ ಮಾಡಬೇಕು. ಆದರೆ ವಿಷಯ ಯಾವುದು? ಇತಿಹಾಸ, ಸಾಹಿತ್ಯ, ಶಾಸನ, ಜಾನಪದ, ದೇವಾಲಯ ಮತ್ತು ಮೂರ್ತಿಶಿಲ್ಪ ಎಲ್ಲವೂ ನನ್ನ ಅಧ್ಯಯನದಲ್ಲಿ ಬಳಕೆಯಾಗುವಂತಹ ವಿಷಯಕ್ಕೆ ಹುಡಕಾಟ ನಡೆಸಿದಾಗ ನನ್ನ ತಲೆಗೆ ಹೊಳೆದಿದ್ದು 'ಸರಸ್ವತಿ'.

'ಈ' ಹುಡುಕಾಟದ ಹಾದಿಯಲ್ಲಿ ಮುಂದುವರೆದು ಮಹಾಪ್ರಬಂಧ ಸಲ್ಲಿಕೆಯಾಗಿ ಪಿಹೆಚ್.ಡಿಯೂ ಬಂತು. ಆದರೆ ಸರಸ್ವತಿಯನ್ನು ಕುರಿತಂತೆ ಸಮಗ್ರವೆನ್ನಬಹುದಾದ ಕೃತಿಯೊಂದನ್ನು ಪ್ರಕಟಸಿಬೇಕೆಂಬ ಶ್ರೀಕಾರ್ಯಕ್ಕೆ ನಾಂದಿ ಹಾಡಿದ್ದು ಗೆಳೆಯ ಸೃಷ್ಟಿ

ನಾಗೇಶ್. ಪ್ರಕಾಶನೋದ್ಯಮದಲ್ಲಿ ಆತನಿಗಿರುವ ಪ್ರೀತಿ ಮತ್ತು ಬದ್ಧತೆ ಇಂದು ಈ ಕೃತಿ ಈ ರೂಪದಲ್ಲಿ ನಿಮ್ಮ ಕೈಯಲ್ಲಿರುವುದಕ್ಕೆ ಕಾರಣವಾಗಿವೆ.

ಡಾ. ಹೆಚ್.ಎಸ್.ವೆಂಕಟೇಶಮೂರ್ತಿ ಅವರ 'ಸಂಶೋಧನೆ ಸಾಮೂಹಿಕ ಕ್ರಿಯಾಶೀಲತೆಯಿಂದ ಕೂಡಿದ್ದು' ಎಂಬ ಮಾತು ನಿತ್ಯಸತ್ಯ! ನನ್ನ 'ಈ' ಹುಡುಕಾಟದ ಹಾದಿಯಲ್ಲಿ ನನಗೆ ಜೊತೆಯಾದವರು ನೂರಾರು ಮಂದಿ. ಅಧ್ಯಯನಕ್ಕೆ ಮಾರ್ಗದರ್ಶಕರಾಗಿದ್ದ ಡಾ. ದೇವರಕೊಂಡಾರೆಡ್ಡಿಯವರು ನಾನು ಪಿಹೆಚ್.ಡಿ. ಪದವಿ ಪಡೆದ ಮೇಲೂ ನನ್ನ ಮೇಲೆ ಅದೇ ವಿಶ್ವಾಸ, ಸ್ನೇಹವನ್ನಿರಿಸಿಕೊಂಡು, ನನ್ನ ಈ ಪ್ರವೃತ್ತಿ ಜೀವನದ ಮಾರ್ಗದರ್ಶಕರೂ ಆಗಿದ್ದಾರೆ. ಹಳಗನ್ನಡ ಮತ್ತು ಸಂಶೋಧನೆಯ ಬಗೆಗಿನ ನನ್ನ ಆಸಕ್ತಿಯನ್ನು ಗಮನಿಸಿ ಪ್ರೋತ್ಸಾಹ ನೀಡುತ್ತಿರುವ ಡಾ. ಕೈದಾಳ ರಾಮಸ್ವಾಮಿ ಗಣೇಶ ಅವರು ಅಧ್ಯಯನದ ಮೊದಲಿನಿಂದ ಈ ಪುಸ್ತಕ ರೂಪುಗೊಳ್ಳುತ್ತಿರುವ ಇಂದಿನವರೆಗೂ ನನ್ನ ಬೆನ್ನುತಟ್ಟಿ ಪ್ರೋತ್ಸಾಹಿಸಿದ್ದಾರೆ. ತಮ್ಮ ಅಮೂಲ್ಯ ಸಮಯವನ್ನು ನನಗಾಗಿ ಕೊಟ್ಟಿದ್ದಾರೆ. ಕರಡನ್ನು ತಿದ್ದಿಕೊಟ್ಟಿದ್ದಲ್ಲದೆ ನೂರಾರು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಈ ಇಬ್ಬರು ಮಹನೀಯರ ಸಹಕಾರದಿಂದಲೇ ಇಂತಹುದೊಂದು ಕೃತಿ ರಚನೆ ಸಾಧ್ಯವಾಗಿದೆ. ಇಬ್ಬರೂ ಗುರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಹಿರಿಯ ಸ್ನೇಹಿತರೂ ಹಾಗೂ ನನ್ನ ಹಿತೈಷಿಗಳೂ ಆದ ಶ್ರೀ ಜಿ.ಎಸ್.ಎಸ್.ರಾವ್ ನನ್ನ ಅಧ್ಯಯನದುದ್ದಕ್ಕೂ ಜೊತೆಗಿದ್ದಾರೆ. ನನ್ನೆಲ್ಲಾ ಬರಹದ ಮೊದಲ ಪ್ರತಿಯನ್ನು ಓದಿ, ಸಲಹೆ ಸೂಚನೆಗಳನ್ನು ಇತ್ತುದಲ್ಲದೆ, ನಾನು ಹಿಂಜರಿದಾಗಲೆಲ್ಲಾ ಬೆನ್ನು ತಟ್ಟಿ ಪ್ರೋತ್ಸಾಹಿಸಿದ್ದಾರೆ; ಈ ಕೃತಿಗೆ ಬೆನ್ನುಡಿಯನ್ನೂ ಬರೆದುಕೊಟ್ಟಿದ್ದಾರೆ. ಅವರೊಂದಿಗೆ ಅವರ ತಾಯಿಯವರೂ ನನ್ನನ್ನು ಪ್ರೀತಿಯಿಂದ ಉಪಚರಿಸಿದ್ದಾರೆ. ಅವರಿಬ್ಬರನ್ನೂ ಇಲ್ಲಿ ಪ್ರೀತಿಯಿಂದ ನೆನೆಯುತ್ತೇನೆ.

ಈ ಕೃತಿಗೆ ಪ್ರೀತಿಯಿಂದ ಮುನ್ನುಡಿ ಬರೆದು ಪ್ರೋತ್ಸಾಹದ ಮಾತುಗಳನ್ನಾಡಿದ ಹಿರಿಯ ಸಾಹಿತಿ ಡಾ. ಹೆಚ್.ಎಸ್.ವೆಂಕಟೇಶಮೂರ್ತಿಯವರಿಗೂ ನಾನು ಆಭಾರಿಯಾಗಿದ್ದೇನೆ.

ನನ್ನ ಬೆಂಗಳೂರು ಬದುಕಿನ ಆರಂಭದಿಂದಲೂ ಸ್ನೇಹಿತರಾಗಿ, ಸಹಪಾಠಿಗಳಾಗಿ ಪ್ರೋತ್ಸಾಹ ನೀಡುತ್ತಿರುವ, ಶ್ರೀಮತಿ ಸಂಧ್ಯಾರಾಮಚಂದ್ರ, ಡಾ. ಬಿ.ಆರ್. ಭಾರತಿ ಹಾಗೂ ಡಾ. ಜಿ.ಮನೋಜ್ ದಂಪತಿಗಳು ಮೊದಲಾದವರನ್ನಿಲ್ಲಿ ಪ್ರೀತಿಯಿಂದ ನೆನೆಯುತ್ತೇನೆ.

ಸುರಾನ ಕಾಲೇಜು ನನ್ನ ಆಶ್ರಯದಾತ ಸಂಸ್ಥೆ. ನನ್ನ ವೃತ್ತಿಯ ಜೊತೆಗೆ ಪ್ರವೃತ್ತಿಗಳನ್ನೂ ಗೌರವಿಸಿ ಪ್ರೋತ್ಸಾಹ ನೀಡುತ್ತಾ ಬಂದಿರುವ ಕಾಲೇಜಿನ ಆಡಳಿತ ಮಂಡಳಿಯ ಶ್ರೀಮತಿ ಅರ್ಚನಾ ಸುರಾನ, ಪ್ರಾಚಾರ್ಯರು ಹಾಗೂ ಎಲ್ಲಾ ಸಹೋದ್ಯೋಗಿ ಮಿತ್ರರ ಸಹಕಾರವನ್ನು ಪ್ರೀತಿಯಿಂದ ಸ್ಮರಿಸುತ್ತೇನೆ.

ನನ್ನ ವೃತ್ತಿ ಪ್ರವೃತ್ತಿಗಳ ಎಲ್ಲಾ ಬಗೆಯ ತರಲೆ-ತಾಪತ್ರಯಗಳನ್ನು ಅನುಭವಿಸುತ್ತಿರುವವರು ನನ್ನ ಕುಟುಂಬ ವರ್ಗದವರು. ನನ್ನ ತಂದೆ, ತಾಯಿ, ಹೆಂಡತಿ ಮತ್ತು ಮುದ್ದಿನ ಮಗಳು ಈಕ್ಷಿತಾ ಅವರ ಬೆಚ್ಚಗಿನ ಪ್ರೀತಿಗೆ ನಾನು ಆಭಾರಿಯಾಗಿದ್ದೇನೆ. ನನಗೆ ಬಾಲ್ಯದಲ್ಲಿಯೇ ಸಾಹಿತ್ಯದ ಆಸಕ್ತಿ ಹುಟ್ಟುವುದಕ್ಕೆ ಕಾರಣಕರ್ತರಾಗಿದ್ದ ನನ್ನ ಪ್ರೀತಿಯ ಅಜ್ಜ ದಿವಂಗತ ಸಣ್ಣತಿಮ್ಮೇಗೌಡ ಅವರನ್ನಂತೂ ನಾನು ಮರೆಯುವ ಹಾಗೆಯೇ ಇಲ್ಲ. ಜೊತೆಗೆ, ನನ್ನ ಅಸಂಖ್ಯಾತ ಬಂಧು-ಮಿತ್ರರನ್ನೂ ಕೂಡಾ.

ಪುಸ್ತಕ ಪ್ರಕಟಣೆಯ ಸಂಪೂರ್ಣ ಹೊಣೆಯೊತ್ತುಕೊಂಡು ಯಶಸ್ವಿಯಾಗಿ ನಿರ್ವಹಿಸಿರುವ ಗೆಳೆಯ ಸೃಷ್ಟಿ ನಾಗೇಶ್ ಮತ್ತು ಆತನ ತಂಡದವರಿಗೂ ಹಾಗೂ ಮುಖಪುಟ ವಿನ್ಯಾಸ ಮಾಡಿದ ಕಿರಣ್ ಮಾಡಾಳ್ ಮತ್ತು ಮುದ್ರಣದ ಜವಾಬ್ದಾರಿ ಹೊತ್ತಿರುವ ಸತ್ಯಶ್ರೀ ಮುದ್ರಣಾಲಯದ ಶ್ರೀಯುತ ಲಿಂಗಪ್ಪನವರಿಗೂ ಜೊತೆಗೆ ಸಹೃದಯ ಓದುಗರಾದ ನಿಮಗೂ ನನ್ನ ವಂದನೆಗಳು.

**ಡಾ. ಬಿ. ಆರ್. ಸತ್ಯನಾರಾಯಣ**

**End of Preview.**

**Rest of the book can be read @**

**[http://kinige.com/kbook.php?id=1387](http://kinige.com/kbook.php?id=1387)**

* * *

**Read other books by Dr. B. R. Satyanarayana @**

**[http://kinige.com/kbrowse.php?via=author&name=Dr.B.R.+Satyanarayana&id=502](http://kinige.com/kbrowse.php?via=author&name=Dr.B.R.+Satyanarayana&id=502)**